ಬರೆದ ಕಥೆಯಲ್ಲಿ ಕೆಲವು ತಪ್ಪುಗಳಿವೆ ಅದನ್ನ ಸರಿಪಡಿಸಿ ಮತ್ತೆ ಬರೆಯಿರಿ. ಒಂದು ಬರೆಯುವಾಗ ನೀವು ಅಟ್ಲೀಸ್ಟ್ ಹೆಸರು ಬದಲಿಸಿರಬೇಕಿತ್ತು. ಆದರೆ ನೀವು ನಮ್ಮದೇ ಹೆಸರನ್ನ ಬಳಸಿದ್ದೀರಿ. ನಮ್ಮದೇ ಕಥೆ ಬರೆದಿದ್ದೀರಿ, ಹಾಗಿದ್ದ ಮೇಲೆ ನಿಜವನ್ನೇ ಬರೆಯಬೇಕಿತ್ತು ಅಷ್ಟೇ.'

'ಹಾಗೆ ಯಾರ ಕುರಿತೂ ಇದಮಿತ್ಥಂ ಎಂದು ಬರೆಯಲಾಗದು, ಬರೆಯಬಾರದು, ಬರೆಯಲಾರೆ ನಾನು, ಮೊದಲಿಗೆ ಅದು ನಿಮಗೆ ಗೊತ್ತಿರಲಿ'.

'ಹಾಗೇ ಅಂದುಕೊಳ್ಳೋಣ. ಆದರೆ ಈಗ ನಾನೇ ಹೇಳುತ್ತಿದ್ದೇನೆ ನನ್ನ ಬಗ್ಗೆ ನಿಜ ಬರೆಯಿರಿ. ನಿಮಗೆ ಈ ಕಥೆ ಓದಿ ಬಹಳಷ್ಟು ಮೆಚ್ಚುಗೆ ಸಿಕ್ಕಿರಬೇಕಲ್ಲ?'

ಅವಳ ಮಾತು ನಿಜವಾಗಿತ್ತು. ಇಂಥಾ ಪ್ರೇಮಿಗಳು ನಿಜವಾಗಿಯೂ ಇರುತ್ತಾರಾ? ಎಂಬ ಪ್ರಶ್ನೆಯನ್ನು ಬಹಳಷ್ಟು ಜನ ಕೇಳಿದ್ದರು. ಎಂಥಾ ಚಂದನೆಯ ಸಂಬಂಧ ಅವರದ್ದು. ಆದರೆ ನಿಜಕ್ಕೂ ಹೀಗಿರಲು ಸಾಧ್ಯವೇ ಅಂತಲೂ ಕೇಳಿದ್ದರು. ಆದರೆ ಅಷ್ಟೆಲ್ಲವನ್ನೂ ಅವಳ ಜೊತೆಗೆ ಹೇಳಬೇಕೆಂದೇನೂ ನನಗನಿಸಲಿಲ್ಲ. 'ಯಾವಾಗಿನಂತೆ ಇದಕ್ಕೂ ಒಂದೆರಡು ಒಳ್ಳೆಯ ಮಾತುಗಳು, ಕೆಲವು ನೆಗೆಟಿವ್ ಕ್ರಿಟಿಸಿಸಮ್ ಬಂತು, ಅದು ಇರುವುದೇ, ಅದರಲ್ಲೇನಿದೆ, ನಾನು ಯಾವುದನ್ನೂ ಹೃದಯಕ್ಕೆ ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ'

'ಇಟ್ ಸೌಂಡ್ಸ್ ಫೇಕ್, ಇರಲಿ ಈ ಭಾಗವನ್ನೊಮ್ಮೆ ಕೇಳಿ, ಇದು ಎಷ್ಟೊಂದು ಸರಿಯಾಗಿದೆ.:

ಅವರು ಒಬ್ಬರನ್ನೊಬ್ಬರು ಹೇಗೆ ಪ್ರೀತಿಸುತ್ತಾರೆಂದರೆ, ಆಕಾಶ ಭೂಮಿಯನ್ನು ಪ್ರೀತಿಸಿದಂತೆ. ಭೂಮಿಯ ಹರವಿನುದ್ದಕ್ಕೂ ಚಾಚಿಕೊಂಡ ಆಗಸ ಇರುಳಿನಲಿ ಕತ್ತಲನ್ನೂ, ಹಗಲಿನಲ್ಲಿ ಬೆಳಕನ್ನೂ, ಸೂರ್ಯನ ಬಿಸುಪನ್ನೂ ನಕ್ಷತ್ರದ ಹೂಗಳನೂ ಮುಡಿಸಿ, ಮಳೆ ಸುರಿಸಿ ಮೀಯಿಸಿ, ಗಾಳಿಯಲ್ಲಿ ಒರೆಸಿ, ಮಂಜಿನಲ್ಲಿ ತೋಯಿಸಿ ಎಷ್ಟೆಲ್ಲ ಮುದ್ದುಗರೆಯುತ್ತಾನೆ... ಭೂಮಿಯೋ... ಅವನ ಪ್ರತಿ ವರಸೆಗೂ ಎದೆ ತೆರೆದು ಒಡ್ಡಿಕೊಳ್ಳುತ್ತಾಳೆ. ಅವಳಿಗೂ ಅದೆಷ್ಟು ರೂಪ! ಹಸಿರು, ಮುನಿಸು, ಬರಡು ಬಂಜೆತನ, ಆವೇಶ, ಮೌನ ....ಅದೆಲ್ಲವೂ ಆಗಸಕೆ ಸಮ್ಮತವೇ. ಅವರಿಬ್ಬರೂ ಕೂಡ ಹಾಗೆಯೇ. ಪರಸ್ಪರ ದೂರುಗಳೇ ಇಲ್ಲದವರು, ಅವರಿಬ್ಬರೂ ಹತ್ತಿರವಿರಲಿಲ್ಲ, ಅವರಿಬ್ಬರು ದೂರವೂ ಇರಲಿಲ್ಲ, ಅವರು ಜೊತೆಗಿದ್ದರು. ಅವರಿಗೆ ಒಬ್ಬರ ಮೇಲೊಬ್ಬರಿಗೆ ಯಾವ ಒಡೆತನದ ಬಿಗಿಯಿರಲಿಲ್ಲ

